ಪುನರ್ ನಿರ್ಮಾಣ, ಕೃಷ್ಣ ಮೇಲ್ದಂಡೆ ಯೋಜನೆ, ನವನಗರ ಬಾಗಲಕೋಟೆ ಅವರಿಗೆ ಸೂಚನೆ ನೀಡಲಾಗಿದೆ.

ಅವರ ವರದಿಯನ್ನು ಕೂಡಲೆ ಪಡೆದು ಪರಿಶೀಲಿಸಿ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು.

ಈಗಾಗಲೇ ಉತ್ತರ ಕನ್ನಡ ಜಿಲ್ಲೆಯ ಬನವಾಸಿಯಲ್ಲಿ ದಿವಂಗತ ಹರ್ಡೇಕರ್ ಮಂಜಪ್ಪನವರ ಸ್ಮಾರಕವನ್ನು ಸ್ಥಾಪಿಸಬೇಕೆಂದು ಸರ್ಕಾರ ನಿರ್ಧರಿಸಿ ಬನವಾಸಿಯಲ್ಲಿ ಹರ್ಡೇಕರ್ ಮಂಜಪ್ಪನವರು ನೆಲೆಸಿದ ಮನೆಯಲ್ಲಿ ವಾಚನಾಲಯವನ್ನು ಸ್ಥಾಪಿಸಲು ಮತ್ತು ಅವರ ಬರಹಗಳನ್ನು ಪುನರ್‌ಮುದ್ರಿಸಿ ಪ್ರಕಟಿಸಲು ಹಾಗೂ ತತ್ಸಂಬಂಧವಾಗಿ ವಿಚಾರ ಸಂಕೀರ್ಣಗಳನ್ನು ನಡೆಸಲು ಮತ್ತು ಸ್ಮಾರಕವನ್ನು ಸ್ಥಾಪಿಸುವ ಸಲುವಾಗಿ ರೂ. 2.00 ಲಕ್ಷ ರೂಗಳನ್ನು ಉತ್ತರ ಕನ್ನಡ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ಮಂಜೂರು ಮಾಡಲಾಗಿದೆ. ಅವರು ವಾಸಿಸಿದ ಮನೆಯನ್ನು ಸರ್ಕಾರದ ವಶಕ್ಕೆ ತೆಗೆದುಕೊಂಡು ಸ್ಮಾರಕವನ್ನು ಸ್ಥಾಪಿಸಲು ಜಿಲ್ಲಾಧಿಕಾರಿಯವರು ಕ್ರಮ ತೆಗೆದುಕೊಂಡಿರುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ ಸೇಡಂ ತಾಲ್ಲೂಕಿನಲ್ಲಿ ನಡೆದಂತಹ ಘಟನೆ ಬಗ್ಗೆ ಪ್ರಸ್ತಾಪ ಮಾಡಿದ್ದೆ. ರಾಮಣ್ಣ ಎನ್ನುವವರು ಪೊಲೀಸ್ ಕಸ್ಟಡಿಯಲ್ಲಿ ಪೊಲೀಸರ ಹೊಡೆತದಿಂದ ಸತ್ತು ಹೋಗಿದ್ದರ ಬಗ್ಗೆ ನಿನ್ನೆ ಸಂಜೆ ಇಲ್ಲವೇ ಇಂದು ಮುಂಜಾನೆ ಹೇಳಿಕೆ ಕೊಡುತ್ತೇನೆಂದು ಹೇಳಿದ್ದರು; ಹೇಳಿಕೆ ಕೊಡಬೇಕು.

5. ಸಚಿವರಿಂದ ಹೇಳಿಕೆ

ಸೇಡಂ ತಾಲ್ಲೂಕಿನ ಪೊಲೀಸ್ ಠಾಣೆಯಲ್ಲಿ ರಾಮಣ್ಣನವರ ಸಾವು.

+ ಶ್ರೀ ಆರ್. ರೋಷನ್ ಬೇಗ್ (ಗೃಹ ಸಚಿವರು):- ಅಧ್ಯಕ್ಷರೇ, Deceased Sri Ramanna was beaten up and he fell un-conscious on the ground ಎಂದು ಎಕ್ಸ್ ದಳಪತಿ ಅವರು ಪೊಲೀಸರಿಗೆ ದೂರು ಕೊಟ್ಟರು, ಆಗ ಪೊಲೀಸರು ಸ್ಥಳಕ್ಕೆ ಹೋಗುತ್ತಾರೆ. ಸಬ್ ಇನ್ಸ್‌ಪೆಕ್ಟರ್ ಅವರು ಸ್ಟೇಷನ್‌ಗೆ ಹೋದಾಗ ರಾಮಣ್ಣ ಅವರು ಕೆಳಗೆ ಬಿದ್ದಿರುತ್ತಾರೆ. ಆಗ ಎಸ್.ಐ. ಅವರು ರಾಮಣ್ಣ ಅವರ ಹೆಂಡತಿ ಮತ್ತು ಅವರ ಇನ್ನೊಬ್ಬ ಸಂಬಂಧಿಕರನ್ನು ಮತ್ತು ರಾಮಣ್ಣನನ್ನು ಕರೆದುಕೊಂಡು ಜೀಪಿನಲ್ಲಿ ಆಸ್ಪತ್ರೆಗೆ ಹೋಗುತ್ತಾರೆ. ಸೇಡಂ ಪೊಲೀಸ್ ಸ್ಟೇಷನ್‌ನಲ್ಲಿ ಕ್ರೈಮ್ ನಂಬರ್ 7/198 ಸೆಕ್ಷನ್ 302, 34 ಐ.ಪಿ.ಸಿ. ಕೆಳಗಡೆ ಒಂದು ಕೇಸ್ ರಿಜಿಸ್ಟರ್ ಆಗುತ್ತದೆ. ರಾಮಣ್ಣ ಅವರ ಚಿಕ್ಕ ತಮ್ಮ ದೇವಪ್ಪ ಅವರು ದೂರು ಕೊಟ್ಟಿದ್ದಾರೆ. ಚಂದ್ರ ಷಾ, ಶಂಕರಪ್ಪ ಇವರಿಬ್ಬರೂ ರಾಮಣ್ಣ ನವರನ್ನು ಹೊಡೆದು ಅದರ ನಂತರ ರಾಮಣ್ಣ ಅವರು ಕೆಳಗೆ ಬಿದ್ದರು ಎಂದು ಇವರು ಹೋಗಿ ದೂರು ಕೊಟ್ಟಿದ್ದಾರೆ. ಆಸ್ಪತ್ರೆಯಲ್ಲಿ ರಾಮಣ್ಣ ಅವರನ್ನು ಕರೆದುಕೊಂಡು ಹೋದಾಗ ಇವರು ಸತ್ತಿದ್ದಾರೆಂದು ಘೋಷಣೆ ಮಾಡಿದ್ದಾರೆ. ಲೋಕಲ್ ದಲಿತ ಆರ್ಗನೈಸೇಷನ್‌ನವರು ಇಲ್ಲಿ, ರಾಮಣ್ಣ ಅವರನ್ನು ಎಸ್.ಐ. ಆದ ರಾಥೋಡ್ ಹೊಡೆದಿದ್ದು ಎಂದು ಆಪಾದನೆ ಮಾಡಿದ್ದಾರೆ. ಆ ಪೊಲೀಸ್ ಇನ್ಸ್‌ಪೆಕ್ಟರ್ ಆದ ರಾಥೋಡ್ ರವರು ಕೂಡ ದಲಿತ ಜನಾಂಗಕ್ಕೆ ಸೇರಿದವರಾಗಿದ್ದಾರೆ. ಅಷ್ಟರಲ್ಲಿ ಗುಲ್ಬರ್ಗಾ

ಜಿಲ್ಲೆಯ ಸೂಪರಿಂಟೆಂಡೆಂಟ್ ಆಫ್ ಪೊಲೀಸ್ ಇವರು ಅಲ್ಲಿಗೆ 7ನೇ ತಾರೀಖು ಹೋಗಿ ಈ ದೂರಿನ ಬಗ್ಗೆ ವಿಚಾರಣೆ ಮಾಡಿದ್ದಾರೆ. ಅಲ್ಲಿನ ಜನರನ್ನು ಕೇಳಿದಾಗ ಚಂದ್ರಷಾ, ಶಂಕರಪ್ಪ ಇವರಿಬ್ಬರೂ ರಾಮಣ್ಣನವರಿಗೆ ಹೊಡೆದರು ಎಂದು ಹೇಳಿದ್ದಾರೆ. ಕಾನೂನಿನ ಪ್ರಕಾರ ಕಸ್ಟಡಿಯಲ್ಲಿ ಡೆತ್ ಆದರೆ ಏನು ಕ್ರಮ ತೆಗೆದುಕೊಳ್ಳಬೇಕು, ಇನ್‌ಕ್ವೆಸ್ಟ್ ಆದಾಗ ಅಲ್ಲಿ ಸಬ್ ಡಿವಿಜನಲ್ ಮ್ಯಾಜಿಸ್ಟ್ರೇಟ್ ರವರು ಹಾಜರಿರಬೇಕಾಗುತ್ತದೆ. ಪೋಸ್ಟ್ ಮಾರ್ಟಮ್ ಎಕ್ಸಾಮಿನೇಷನ್ನಿನ ಅವಶ್ಯಕತೆ ಕೂಡ ಇದೆ. ವಿಡಿಯೋ ಟೇಪ್ ಕೂಡ ಮಾಡುತ್ತಾರೆ. ಕಾಸ್ ಆಫ್ ಡೆತ್ ಏನು ಎಂದು ನಮಗೆ ವರದಿ ಬರಬೇಕು; ಕೆಮಿಕಲ್ ಅನಾಲಿಸಿಸ್‌ಗೆ ಕಳುಹಿಸಿದ್ದೇವೆ. ಅವರು ನಮಗೆ ಕಾಸ್ ಆಫ್ ಡೆತ್ ಬಗ್ಗೆ ನಿಖರವಾದ ಮಾಹಿತಿಯನ್ನು ಕೊಡುತ್ತಾರೆ. ಆಗ ನಮಗೆ ಗೊತ್ತಾಗುತ್ತದೆ. ಬಾಡಿಯಲ್ಲಿ ಯಾವುದೇ ಎಕ್ಸ್‌ಟರ್ನಲ್ ಇಂಜ್ಯೂರೀಸ್ ಏನೂ ಇಲ್ಲ. ಲೋಕಲ್ ದಲಿತ ಆರ್ಗನೈಸೇಷನ್‌ನವರು ಆ ಎಸ್.ಐ. ನವರನ್ನು ಸಸ್ಪೆನ್‌ಷನಲ್ಲಿಡಬೇಕೆಂದು ಹೇಳಿದ್ದಾರೆ. ಪ್ರಾಮಾಣಿಕ ವಿಚಾರಣೆ ನಡೆಯಬೇಕೆಂದು ಅಲ್ಲಿಂದ ರಾಥೋಡ್ ಅವರನ್ನು ರಿಲೀವ್ ಮಾಡಿದ್ದೇವೆ. ಒಬ್ಬ ಮಲ್ಲಿಕಾರ್ಜುನ್ ಎಂಬ ಇನ್‌ಸ್ಪೆಕ್ಟರ್ ಅವರಿಗೆ ಈ ಕೇಸ್ ಅನ್ನು ವಹಿಸಿದ್ದೇವೆ; ವಿಚಾರಣೆ ನಡೆಯುತ್ತಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:– ಆ ಸಬ್ ಇನ್ಸ್‌ಪೆಕ್ಟರ್ ಅವರೇ ರಾಮಣ್ಣ ಎನ್ನುವವರನ್ನು ಹೊಡಿದಿದ್ದಾರೆ ನಂತರ ಆತನು ಅಲ್ಲೇ ಪ್ರಜ್ಞಾಶೂನ್ಯನಾಗಿದ್ದಾನೆ, ಅದಕ್ಕೆ ಅವನು ತನ್ನ ಜೀಪಿನಲ್ಲೇ ಹಾಕಿಕೊಂಡು ಜೊತೆಯಲ್ಲಿ ತಾಯಿ, ತಮ್ಮನನ್ನು ಕರೆದುಕೊಂಡು ಅಡ್ಮಿಟ್ ಮಾಡಿಸಿ ಹೋದ ಅಲ್ಲಿ ಅವನು ಸತ್ತಿದ್ದಾನೆ. ಅಂದರೆ ಅವನೇ ಹೊಡೆದಿದ್ದಾನೆ ಎಂದು ನಿಮ್ಮ ಸೂಪರಿಂಟೆಂಡೆಂಟ್ ಆಫ್ ಪೊಲೀಸ್ ಇವರೆಲ್ಲರಿಗೂ ಮನವರಿಕೆಯಾದ ಮೇಲೆ ಅವರನ್ನು ಸಸ್ಪೆಂಡ್ ಮಾಡಿದ್ದುದು. ಮತ್ತೆ ಈಗ ನೀವು ಪುನಃ ಯಾರು ಹೊಡೆದಿದ್ದಾರೆ ಎಂಬುದನ್ನು ತನಿಖೆ ಮಾಡುತ್ತೇವೆ ಎಂದರೆ ಸಬ್ ಇನ್‌ಸ್ಪೆಕ್ಟರನ್ನು ಅಲ್ಲಿಂದ ಸ್ಥಳಾಂತರ ಮಾಡಬೇಕಾದ ಅಥವಾ ಸಸ್ಪೆಂಡ್ ಮಾಡಬೇಕಾದ ಅವಶ್ಯಕತೆಯೇ ಇರಲಿಲ್ಲ. ಇದನ್ನು ಆ ಊರಿನ ಜನರೂ ಕೂಡ ಹೇಳುತ್ತಾರೆ. ಆ ಊರಿನ ಜಗಳ ಏನೇ ಇರಲಿ ಪೊಲೀಸರು ಮತ್ತು ಆ ಊರಿನ ಜನ ಅಥವಾ ರಾಮಣ್ಣ ಮತ್ತು ಇತರರು ನಡುವೆ ನಡೆದಂತಹ ಜಗಳದಲ್ಲಿ ಹೊಡೆದಾತ ದಲಿತ ಇನ್‌ಸ್ಪೆಕ್ಟರರೇ ಇರಬಹುದು. ಆದರೆ ಇನ್‌ಸ್ಪೆಕ್ಟರ್ ದಲಿತ ಜನಾಂಗದವರಾದ್ದರಿಂದ ಹೊಡೆಯಬಹುದು ಎಂದು ಏನಾದರೂ ನಿಯಮವಿದೆಯೇ? ಕಾನೂನು ಎಲ್ಲರಿಗೂ ಒಂದೇ ಆದರೆ ಇಲ್ಲಿ ಯಾರು ವಿಕ್ಟಿಮ್ ಇದ್ದಾನೆ ಅವನಿಗೆ ನ್ಯಾಯ ಸಿಗಬೇಕು. ಏಕೆಂದರೆ ಪೊಲೀಸರ ಹೊಡೆತದಿಂದಲೇ ಆತ ಸತ್ತಿದ್ದಾನೆಯೇ ಅಥವಾ ಗುಂಪು ಘರ್ಷಣೆಯಲ್ಲಿ ಆತ ಸತ್ತಿದ್ದಾನೆಯೇ ಎಂಬ ಸತ್ಯಾಂಶ ಹೊರಬರಬೇಕು. ಆದರೆ ಗುಂಪು ಘರ್ಷಣೆಯಲ್ಲಿನ ಹೊಡೆತದಿಂದ ಅವನಿಗೆ ಪೆಟ್ಟಾಗಿಲ್ಲ ಎಂದು ಆ ಊರಿನ ಜನರೆಲ್ಲರೂ ಹೇಳುತ್ತಾರೆ. ಏಕೆಂದರೆ ಚಂದ್ರೇಷಾ ಮತ್ತು ಶಂಕರಪ್ಪ ಎನ್ನುವವರು ಪೊಲೀಸರಿಗೆ ಟೆಲಿಫೋನ್ ಮಾಡಿ ಕೆರಸಿಕೊಂಡಿದ್ದರು. ಚಂದ್ರಷ ಎನ್ನುವವರು ಪ್ರಜ್ಞೆ ಕಳೆದುಕೊಂಡಿದ್ದಾರೆ. ಅದಕ್ಕಾಗಿ ತಾವು ಬರಬೇಕು ಎಂದು. ಅವನು ಅನ್‌ಕಾನ್‌ಶಿಯಸ್ ಆಗಿದ್ದು ಅವನೇ ಹೇಗೆ ರಿಪೋರ್ಟ್ ಕೊಡುತ್ತಾನೆ? ಇದನ್ನೆಲ್ಲಾ ನೋಡಿದಾಗ ಈ ಪ್ರಶ್ನೆಯೇ ಉದ್ಭವಿಸುವುದಿಲ್ಲವೆನಿಸುತ್ತದೆ. ಆದುದರಿಂದ ತಾವು ದಯಮಾಡಿ ಇದರ ಬಗ್ಗೆ ತನಿಖೆ ನಡೆಸಬೇಕು. ಮತ್ತು ಸತ್ತಂಥ ಕುಟುಂಬಕ್ಕೆ ಪರಿಹಾರ

ಕೊಡಬೇಕಾಗುತ್ತದೆ. ಏಕೆಂದರೆ; ಅವನು ಪೊಲೀಸರ ಕಸ್ಟಡಿಯಲ್ಲಿ ಸತ್ತಿದ್ದಾನೆ. ಹಾಗೂ ಸಂಬಂಧಪಟ್ಟ ಪೊಲೀಸ್ ಅಧಿಕಾರಿ ಯಾರೇ ಆಗಿದ್ದರೂ ಕೂಡ ಅಂದರೆ ಅವನು ದಲಿತ ಜನಾಂಗಕ್ಕೆ ಸೇರಿರಲಿ ಅಥವಾ ಇಲ್ಲದಿರಲಿ ಆತನ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಏಕೆಂದರೆ ಒಂದು ಸಲ ಪೊಲೀಸ್ ಡ್ರಸ್ ಮೈಮೇಲೆ ಬಂದರೆ ಎಲ್ಲರ ಮೇಲೂ ಅದರ ಸವಾರಿ ಇರುತ್ತದೆ. ನಮ್ಮಲ್ಲಿ ಕೌಡಿಪೀರ್ ಎಂದು ಏನು ಹೇಳುತ್ತೇವೆ ಹಾಗೆ ಎಲ್ಲರೂ ಕೌಡಿ ಪೀರ್‌ಗಳಾಗಿಬಿಡುತ್ತಾರೆ. ದಯವಿಟ್ಟು ಇದನ್ನು ಸಂಪೂರ್ಣವಾಗಿ ತನಿಖೆ ನಡೆಸಿ ಆ ಕುಟುಂಬಕ್ಕೆ ನಿಮ್ಮ ಇಲಾಖೆಯಿಂದ ಅಥವಾ ಸಮಾಜ ಕಲ್ಯಾಣ ಇಲಾಖೆಯಿಂದ ಪರಿಹಾರ ಕೊಡಿಸುವ ವ್ಯವಸ್ಥೆ ಮಾಡಿ. ಏಕೆಂದರೆ ಆ ಊರಿನಲ್ಲಿ ಇಂತಹ ಘಟನೆಗಳು ಅನೇಕ ಸಲ ನಡೆದಿವೆ. ಸುಮಾರು 5 ತಿಂಗಳ ಹಿಂದೆ ಅವನ ಸಹೋದರನ ಕೊಲೆ ಅಲ್ಲಿಯೇ ಆಗಿದೆ. ಅದನ್ನೂ ಕೂಡ ನಾವು ಇಲ್ಲಿ ಪ್ರಸ್ತಾಪ ಮಾಡಿದ್ದೇವೆ. ಆತ ಬಸ್ ಇಳಿದು ಮೂತ್ರ ವಿಸರ್ಜನೆಗೆಂದು ಹೋದಾಗ ನಾಲ್ಕೈದು ಜನರು ಸೇರಿ ಆತನ ಮೇಲೆ ಕಲ್ಲನ್ನು ಎತ್ತಿಹಾಕಿ ಕೊಂದರು. ಅಳ್ಳೊಳ್ಳಿ ಗ್ರಾಮದಲ್ಲಿ ಈ ರೀತಿ ಪದೇ ಪದೇ ಕೊಲೆಗಳು ನಡೆಯುತ್ತಿರುವ ವಿಚಾರ ಪೋಲೀಸರಿಗೆ ಗೊತ್ತಿದ್ದರೂ ಕೂಡ ಇದರ ಹಿಂದೆ ಮುಖಂಡರು ಅಥವಾ ಪ್ರಮುಖರ ಕೈವಾಡವಿದೆಯೋ, ಆ ಊರಿನ ಜನರಿದ್ದಾರೋ ಅಥವಾ ಗುಂಪುಘರ್ಷಣೆಯಿಂದ ಇವುಗಳು ಆಗುತ್ತಿವೆಯೋ ಎಂಬುದನ್ನು ಅವರು ಸರಿಯಾಗಿ ತನಿಖೆ ಮಾಡುತ್ತಿಲ್ಲ. ಆದುದರಿಂದ ಆ ಬಗ್ಗೆ ಸೂಕ್ತ ತನಿಖೆಯಾಗಬೇಕು. ಏಕೆಂದರೆ ಈ ಬಗ್ಗೆ ಮಾಹಿತಿ ಇದ್ದರೂ ಕೂಡ ಪೋಲೀಸರ ನಿರ್ಲಕ್ಷ್ಯದಿಂದ ಅಲ್ಲಿ ಪ್ರತಿ 6 ತಿಂಗಳಿಗೆ ಒಂದು ಹೆಣ ಹೋಗುತ್ತಿದೆ. ಅದಕ್ಕೆ ಯಾವ ಅಧಿಕಾರಿ ಇದರಲ್ಲಿ ಇನ್ವಾಲ್ ಆಗಿದ್ದಾರೆ ಅವರ ಮೇಲೆ ಕಾನೂನು ಕ್ರಮ ಜರುಗಿಸಿ ನೀವು ಚಾರ್ಜ್‌ಶೀಟ್ ಮಾಡಬೇಕಾಗುತ್ತದೆ.

ಶ್ರೀ ಆರ್. ರೋಷನ್ ಬೇಗ್:- ಮಾನ್ಯ ಸಭಾಧ್ಯಕ್ಷರೇ, ನಾನು ವಿರೋಧ ಪಕ್ಷದ ನಾಯಕರಾದಂತಹ ಶ್ರೀ ಮಲ್ಲಿಕಾರ್ಜುನ ಖರ್ಗೆಯವರು ಹೇಳಿರುವ ಮಾತುಗಳನ್ನು ಒಪ್ಪುತ್ತೇನೆ. ಸಂಬಂಧಪಟ್ಟ ಆ ಸಬ್ ಇನ್‌ಸ್ಪೆಕ್ಟರನ್ನು ಸಸ್ಪೆಂಡ್ ಮಾಡಿಲ್ಲ. He has been shifted to conduct a fair enquiry.

ಅದು ಏನೇ ಆದರೂ ಇವತ್ತು ನಾನು ಆ ಏರಿಯಾ ಡಿ.ಐ.ಜಿ. ಯವರನ್ನೂ ಕರೆಸಿ ಈ ದೂರಿನ ಬಗ್ಗೆ ತನಿಖೆ ನಡೆಸುತ್ತಿರುವ ಇನ್ಸ್‌ಪೆಕ್ಟರ್ ಮಲ್ಲಿಕಾರ್ಜುನ ಅವರೊಂದಿಗೂ ಮಾತುಕತೆ ನಡೆಸುತ್ತೇನೆ ಎಂದು ತಮಗೆ ಆಶ್ವಾಸನೆ ಕೊಡುತ್ತೇನೆ. ಈ ಕೇಸಿನ ಬಗ್ಗೆ ಇನ್‌ಸ್ಪೆಕ್ಟರ್ ಮಲ್ಲಿಕಾರ್ಜುನ ಎನ್ನುವವರು ತನಿಖೆ ಮುಂದುವರೆಸುತ್ತಿದ್ದಾರೆ, to conduct a detailed enquiry as to whether it was a local group clash.

ಆತ ಸತ್ತದ್ದು ಗುಂಪು ಘರ್ಷಣೆಯಿಂದಲೇ ಅಥವಾ ಬೇರೆ ಕಾರಣದಿಂದಲೇ ಎಂಬುದನ್ನು ಖಚಿತ ಪಡಿಸಿಕೊಳ್ಳಲು ನಾವು ಕೆಮಿಕಲ್ ಅನಾಲೈಸಿಸ್ ಮತ್ತು ಪೋಸ್ಟ್‌ಮಾರ್ಟಂ ವರದಿಯನ್ನು ನಿರೀಕ್ಷಿಸುತ್ತಿದ್ದೇವೆ. ಆದರಲ್ಲಿ ಏನಾದರೂ ಆ ವ್ಯಕ್ತಿ ಪೊಲೀಸರ ಹೊಡೆತದಿಂದಲೇ ಸತ್ತಿದ್ದಾನೆ ಎಂದು ಪ್ರೂವ್ ಆದರೆ We will not hesitate to take action against the police. ಕಳೆದ ಸಲ ಅಧಿವೇಶನ ಸಮಯದಲ್ಲಿ ಹೆಚ್.ಎ.ಎಲ್. ಪೊಲೀಸ್ ಸ್ಟೇಷನ್‌ನ ಕಸ್ಟಡಿಯಲ್ಲಿ ಒಬ್ಬ ದಲಿತ ಹುಡುಗನ ಸಾವು ಸಂಭವಿಸಿದಾಗ the Inspector was sent

to judicial custody. the local Inspector was sent to judicial custody and a case under Section 302 IPC was taken against him. I assure that we will not hesitate to take action against the police officer.

ಅದು ಏನೇ ಇರಲಿ ನಾವು ಅಲ್ಲಿನ ಡಿ.ಐ.ಜಿ. ಯವರನ್ನು ಕರೆಸಿ ತನಿಖೆ ಮಾಡುತ್ತೇವೆ. ಇದಕ್ಕೆ ಮೊದಲೂ ಕೂಡ ಆತನ ಸಹೋದರನ ಕೊಲೆಯಾಯಿತು ಎಂದು ತಾವು ಹೇಳಿದಿರಿ. ಆ ಬಗ್ಗೆ ಕೂಡ ಒಂದು ವಿವರವಾದ ತನಿಖೆಯನ್ನು ವ್ಯವಸ್ಥೆಗೊಳಿಸುತ್ತೇವೆ. ಇನ್ನು ಪರಿಹಾರವನ್ನು ಕುರಿತಂತೆ ಸಮಾಜ ಕಲ್ಯಾಣ ಇಲಾಖೆಯೊಂದಿಗೆ ಚರ್ಚೆ ನಡೆಸಿ ವ್ಯವಸ್ಥೆ ಮಾಡುತ್ತೇನೆ.

6. ರಾಜ್ಯಪಾಲರ ವಂದನಾ ನಿರ್ಣಯದ ಮೇಲಿನ ಚರ್ಚೆ

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ):- ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ವಂದನಾ ನಿರ್ಣಯವನ್ನು ವಿರೋಧ ಮಾಡುತ್ತಾ ನಾನು ನನ್ನ ಮಾತುಗಳನ್ನು ಸಮರ್ಥಿಸಿಕೊಳ್ಳ ಬೇಕಾದರೆ ಎರಡು ಮಾತುಗಳನ್ನು ವಿಸ್ತರಿಸಿ ಹೇಳಬೇಕಾಗುತ್ತದೆ. ಒಂದು ರಾಜ್ಯದ ಅಭಿವೃದ್ಧಿಯ ದೃಷ್ಟಿಕೋನದಿಂದಲೂ ಮತ್ತು ಸಾಮಾಜಿಕ ನ್ಯಾಯವನ್ನು ದೊರಕಿಸಿಕೊಡುವ ದೃಷ್ಟಿಯಿಂದಲೂ ಸರ್ಕಾರಕ್ಕೆ ತನ್ನದೇ ಆದಂತಹ ಕಾರ್ಯಕ್ರಮಗಳು ತತ್ವ ಸಿದ್ಧಾಂತಿಗಳು ಇರಬೇಕಾಗುತ್ತದೆ. ಇತ್ತೀಚೆಗೆ ನಡೆದಂತಹ 12ನೇ ಲೋಕಸಭಾ ಚುನಾವಣೆ ಈ ಸರ್ಕಾರಕ್ಕೆ ಒಂದು ಪಾಠವನ್ನು ಕಲಿಸಿತು. ಅದನ್ನು ಅವರೂ ಕೂಡ ಒಪ್ಪಿಕೊಳ್ಳುತ್ತಾರೆ. ರಾಜ್ಯಪಾಲರು ತಮ್ಮ ಭಾಷಣದಲ್ಲಿ ಎರಡು ಮಾತುಗಳನ್ನು ಹೇಳಿದ್ದಾರೆ. ಜನತೆಯ ಆಶೋತ್ತರಗಳು ಮೇಲಟ್ಟಕ್ಕೇರಿದ್ದು ಸರ್ಕಾರ ಇನ್ನೂ ಉತ್ತಮವಾಗಿ ಕಾರ್ಯ ನಿರ್ವಹಿಸಬೇಕು ಎಂದು ಜನ ನಿರ್ಣಯದಲ್ಲಿ ವ್ಯಕ್ತವಾಗಿರುವ ಅಭಿಪ್ರಾಯವನ್ನು ನನ್ನ ಸರ್ಕಾರ ತುಂಬಾ ಗೌರವದಿಂದ ಸ್ವೀಕರಿಸಿದೆ. ಅಂದರೆ ಜನರ ನಿರೀಕ್ಷಣೆಗೂ ಸರ್ಕಾರದ ಸಾಧನೆಗೂ ಅಥವಾ ಅದು ಹೋಗತಕ್ಕಂತಹ ವೇಗಕ್ಕೂ ಅಜಗಜಾಂತರ ವ್ಯತ್ಯಾಸವಿರುವುದರಿಂದ ಜನರ ನಿರೀಕ್ಷಣೆಯನ್ನು ಮುಟ್ಟುವುದಕ್ಕೆ ಸಾಧ್ಯವಾಗಲಿಲ್ಲ. ಆದುದರಿಂದ ನೀವು ಸೋತಿದ್ದೀರಿ ಎನ್ನುವಂತಹ ಮಾತನ್ನು ಈ ವಾಕ್ಯದಿಂದ ನಾವು ಗುರುತಿಸಬಹುದು. ಆದರೆ ಒಂದು ಕೈಯಲ್ಲಿ ಸರ್ಕಾರ ಇಟ್ಟುಕೊಂಡು ಮೂರು ವರ್ಷ ಆಡಳಿತ ನಡೆಸಿ ತನ್ನದೇ ಆದಂತಹ ಕಾರ್ಯಕ್ರಮಗಳನ್ನು ಪ್ರಾಮಾಣಿಕವಾಗಿ ಅನುಷ್ಠಾನಗೊಳಿಸಿದ್ದರೆ ನೀವು ಇಷ್ಟೊಂದು ಹೀನಾಯವಾಗಿ ಸೋಲಬೇಕಾದಂತಹ ಪರಿಸ್ಥಿತಿ ಈ ಸರ್ಕಾರಕ್ಕೆ ಬರುತ್ತಿರಲಿಲ್ಲ. ಒಂದು ದೃಷ್ಟಿಯಿಂದ ಸರ್ಕಾರ ತನ್ನ ತಪ್ಪನ್ನು ಒಪ್ಪಿಕೊಂಡ ಮೇಲೆ ಬಹಳ ಸೌಜನ್ಯದಿಂದ, ಗೌರವದಿಂದ ಮುಖ್ಯಮಂತ್ರಿಗಳು ತಮ್ಮ ಸ್ಥಾನವನ್ನು ತೆರವು ಮಾಡಿ ಮತ್ತೆ ಹೊಸ ಚುನಾವಣೆ ಕಡೆಗೆ ಹೋಗತಕ್ಕಂತಹ ಪ್ರಯತ್ನವನ್ನು ಮಾಡಬೇಕಾಗಿತ್ತು. ಆದರೆ ಆ ಕೆಲಸ ಅವರಿಂದ ಆಗಲಿಲ್ಲ. ಈಗ ಅವರು ಸದನದಲ್ಲಿಲ್ಲ. ಅವರು ಈ ಅವಧಿಯಾದ ಮೇಲೆ ರಾಜ್ಯದ ರಾಜಕಾರಣದಲ್ಲಿ ಸಕ್ರೀಯವಾಗಿ ಉಳಿಯಬೇಕೆಂದು ಉದ್ದೇಶವಿಟ್ಟುಕೊಂಡಿದ್ದಾರೋ ಅಥವಾ ಈ ಅವಧಿ ಮುಗಿದ ಮೇಲೆ ವಿಶ್ರಾಂತ ಜೀವನವನ್ನು ಕಳೆಯಬೇಕೆಂದು ಅಪೇಕ್ಷೆ ಇಟ್ಟುಕೊಂಡಿದ್ದಾರೋ ನನಗೆ ಗೊತ್ತಿಲ್ಲ.

ಉಪಾಧ್ಯಕ್ಷರು:- ತಾವು ಮತ್ತು ಅವರು ಒಂದೇ ಜಿಲ್ಲೆಯವರಲ್ಲವೇ?